**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 3254/2023</u>**

**ದಿನಾಂಕಃ 29-10-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು ಃ | ರವಿ ಜಿ ಎ | ಚಾಸಾ-1, ಪ್ರಾಸ-1 |
| ಗಂಡನ ಹೆಸರು ಃ | ಅಣ್ಣಪ್ಪ | |
| ವಯಸ್ಸು ಃ | 39 ವರ್ಷ | |
| ಉದ್ಯೋಗ ಃ | ಉಪ ನಿರೀಕ್ಷಕರು | |
| ವಾಸ ಃ | ಚಿಕ್ಕಮಗಳೂರು | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ನಾನು ದಿಃ 30.01.2023 ರಿಂದ 08.06.2023 ರವರೆಗೆ ಬೀರೂರು ಪೋಲಿಸ್ ಠಾಣೆಯಲ್ಲಿ ಆರಕ್ಷಕ ಉಪ ನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 15.03.2023 ರಂದು ಸಂಜೆ 5.30 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ ಹೊಗರೆಹಳ್ಳಿ ಗ್ರಾಮದ ವಾಸಿಯಾದ ಕಾಂತರಾಜು ರವರು ಅವರ ಮನೆಯ ಮುಂದೆ ಅಕ್ರಮವಾಗಿ ಮದ್ಯವನ್ನು ಸಂಗ್ರಹಿಸಿ ಮಾರಾಟ ಮಾಡುತ್ತಿರುವ ಬಗ್ಗೆ ನನಗೆ ಮಾಹಿತಿ ಬಂದಿದ್ದು, ನಾನು ಸದರಿ ಮಾಹಿತಿಯನ್ನು ಆಧರಿಸಿ ಸ್ವ ಪಿರ್ಯಾದನ್ನು ತಯಾರಿಸಿ ಠಾಣಾ ಮೊಕದ್ದಮೆ ಸಂಖ್ಯೆ 41ಃ2023 ರಂತೆ ಪ್ರಕರಣವನ್ನು ದಾಖಲಿಸಿರುತ್ತೇನೆ ಹಾಗೂ ನ್ಯಾಯಾಲಯಕ್ಕೆ ಪ್ರವ ವರದಿ ಹಾಗೂ ಶೋಧನಾ ಸಮುಚಿತ ಆಧಾರವನ್ನು ನಿವೇದಿಸಿರುತ್ತೇನೆ. ನಂತರ ತನಿಖೆಯನ್ನು ಮುಂದುವರೆಸಿ ಸಂಜೆ 6.00 ಗಂಟೆಗೆ ಇಲಾಖಾ ಜೀಪಿನಲ್ಲಿ ಠಾಣಾ ಸಿಬ್ಬಂದಿಗಳಾದ ಚಾಸಾ-4 ರಿಂದ 7 ರವರನ್ನು ಕರೆದುಕೊಂಡು ಹೊರಟು ಸಂಜೆ 6.30 ಗಂಟೆಗೆ ಹೊಗರೆಹಳ್ಳಿ ಕ್ರಾಸ್ ಹತ್ತಿರ ತಲುಪಿ ಅಲ್ಲಿದ್ದ ಚಾಸಾ-2 ಮತ್ತು 3 ರವರಿಗೆ ತನಿಖೆಗೆ ಸಹಕರಿಸುವಂತೆ ಕೋರಿ ನೋಟಿಸನ್ನು ಜಾರಿ ಮಾಡಿರುತ್ತೇನೆ. ನಂತರ 6.35 ಗಂಟೆಗೆ ಅಲ್ಲಿಂದ ಪಂಚರೊಂದಿಗೆ ಹೊರಟು 6.45 ಗಂಟೆಗೆ ಮಾಹಿತಿ ಬಂದ ಸ್ಥಳಕ್ಕೆ ತಲುಪಿದಾಗ ಸಮವಸ್ತ್ರದಲ್ಲಿದ್ದ ನಮ್ಮನ್ನು ಮತ್ತು ಇಲಾಖಾ ಜೀಪನ್ನು ನೋಡಿ ಅಲ್ಲಿದ್ದ ಸಾರ್ವಜನಿಕರು ಓಡಿ ಹೋಗಿದ್ದು ಆಗ ವಿಮಲ್ ಗುಟ್ಕಾ ಚೀಲವನ್ನು ಹಿಡಿದುಕೊಂಡಿದ್ದ ವ್ಯಕ್ತಿಯೂ ಓಡಿ ಹೋಗಿದ್ದು ಆತನನ್ನು ಹಿಡಿಯಲು ಚಾಸಾ-4 ಮತ್ತು 7 ಹಿಡಿಯಲು ಪ್ರಯತ್ನಿಸಿದ್ದು ಸದರಿ ವ್ಯಕ್ತಿಯು ಚೀಲವನ್ನು ಅಲ್ಲೇ ಬಿಸಾಡಿ ಓಡಿ ಹೋಗಿದ್ದು ನಮ್ಮ ಜೊತೆಯಲ್ಲಿದ್ದ ಚಾಸಾ-2 ಮತ್ತು 3 ರವರ ಬಳಿ ಸದರಿ ವ್ಯಕ್ತಿಯ ಬಗ್ಗೆ ಕೇಳಲಾಗಿ ಆತನ ಹೆಸರು ಕಾಂತರಾಜ ಬಿನ್ ಪೃತ್ವಿರಾಜ ಹಾಗೂ ಸದರಿ ಮನೆ ಕಾಂತರಾಜ ರವರಿಗೆ ಸೇರಿರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ಪಂಚರ ಸಮಕ್ಷಮ ಆರೋಪಿ ಎಸೆದು ಹೋದ ಚೀಲವನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ 90 ಎಂಎಲ್ ನ 137 ರಾಜಾವಿಸ್ಕಿ ಎಂದು ಬರೆದಿರುವ ಪೌಚುಗಳು ಇದ್ದವು. ಅದರ ಬ್ಯಾಚ್ ಸಂ 397 ಎಂದು ನಮೂದಾಗಿತ್ತು. ಒಟ್ಟು ಮದ್ಯ 12 ಲೀ 330 ಮಿಲಿ ಇದ್ದು ಅವುಗಳ ಒಟ್ಟು ಮೌಲ್ಯ ರೂ. 4,812 ಆಗಿರುತ್ತದೆ ಎಂದು ಪಂಚರು ಅಭಿಪ್ರಾಯ ಪಟ್ಟಿರುತ್ತಾರೆ. ಮಹಜರನ್ನು ಸಂಜೆ 7.00 ರಿಂದ 8.00 ಗಂಟೆವರೆಗೆ ಕಾಂತರಾಜ ರವರ ಮನೆಯ ಮುಂಭಾಗದ ವಿದ್ಯುತ್ ದೀಪದ ಸಹಾಯದಿಂದ ಜರುಗಿಸಿರುತ್ತೇವೆ. ಮಹಜರ್ ಕಾಲದಲ್ಲಿ ಕಚ್ಚಾ ನಕಾಶೆ ಹಾಗೂ ಛಾಯಾಚಿತ್ರ ತೆಗೆಯಲಾಗಿರುತ್ತದೆ. ಮಹಜರ್ ಗೆ ನನ್ನ ಹಾಗೂ ಪಂಚರ ಸಹಿ ಪಡೆದಿರುತ್ತೇನೆ. ವಶಪಡಿಸಿಕೊಂಡ ಮದ್ಯವನ್ನು ಅದೇ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ

ಬಾಯನ್ನು ದಾರದಿಂದ ಕಟ್ಟಿ ಪಿ ಎಂಬ ಸೀಲು ಮಾಡಿ ಕೇಸಿನ ವಿವರವನ್ನು ಒಂದು ಬಿಳಿ ಹಾಳೆಯಲ್ಲಿ ಬರೆದು ಪಂಚರ ಸಹಿ ಪಡೆದು ನಾನು ಸಹಿ ಮಾಡಿ ಚೀಲದ ಮೇಲೆ ಅಂಟಿಸಿರುತ್ತೇನೆ. ನಂತರ ವಶಪಡಿಸಿಕೊಂಡ ಮದ್ಯದೊಂದಿಗೆ ಠಾಣೆಗೆ ಬಂದು ಮಾಲು ಪಟ್ಟಿ ಸಂ 25ಃ 2023 ರಂತೆ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-11 ರವರಿಗೆ ನೀಡಿರುತ್ತೇನೆ. ಸಾಕ್ಷಿಯು ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಪ್ರವ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಶೋಧನಾ ಸಮುಚಿತ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಚಾಸಾ-2 ಮತ್ತು 3 ರವರಿಗೆ ನೀಡಿದ ನೋಟಿಸನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು, ಸಾಕ್ಷಿ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು, ಸಾಕ್ಷಿ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ತೆಗೆಯಲಾದ ಛಾಯಾಚಿತ್ರವನ್ನು ನಿಪಿ-6 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮದ್ಯದ ಪೌಚುಗಳನ್ನು ಹೊಂದಿದ್ದ ಚೀಲವನ್ನು ಮುಮಾ-1 ಎಂದು, ಸಾಕ್ಷಿ ಸಹಿಯನ್ನು ಮುಮಾ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ</u>

ಘಟನಾ ಸ್ಥಳಕ್ಕೂ ಠಾಣೆಗೂ ಸುಮಾರು 11 ಕಿಮಿ ಅಂತರ ಇರುತ್ತದೆ. ಸಂಜೆ 6.00 ಗಂಟೆಗೆ ಠಾಣೆಯಿಂದ ಹೊರಟಿರುತ್ತೇವೆ. ಠಾಣೆಯನ್ನು ಬಿಟ್ಟ ಸಮಯದಲ್ಲಿ ಪ್ರವ ವರದಿ ದಾಖಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮುಮಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಮದ್ಯದ ಪೌಚುಗಳನ್ನು ಆರೋಪಿಯ ಸಮಕ್ಷಮ ವಶಪಡಿಸಿಕೊಂಡಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಆರೋಪಿ ಓಡಿ ಹೋಗಿರುತ್ತಾನೆ ಎಂದು ನುಡಿಯುತ್ತಾರೆ. ನಾನು ಯಾವುದೇ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಹಾಗೂ ಆರೋಪಿಯಿಂದ ಯಾವುದೇ ಮದ್ಯವನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಮದ್ಯವನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಮಹಜರನ್ನು ಠಾಣೆಯಲ್ಲೇ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಅಪರಾಧ ಎಸಗದಿದ್ದರೂ ಸಹ ಠಾಣಾ ಅಂಕಿ ಸಂಖ್ಯೆಗಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.